ರಾಜ್ಯದ ಅಂಗನವಾಡಿ ಮಕ್ಕಳಿಗೆ ಉಚಿತ ಹಾಲು ಸರಬರಾಜು

608(393) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿದಿನ ಉತ್ಪಾನೆಯಾಗುವ ಸರಾಸರಿ ಹಾಲಿನ ಪ್ರಮಾಣವೆಷ್ಟು?

ಆ) ರಾಜ್ಯದಲ್ಲಿ ಪ್ರತಿದಿನ ಸರಾಸರಿ ಹಾಲಿಗಿರುವ ಬೇಡಿಕೆ ಎಷ್ಟು?

ಇ) ಹೆಚ್ಚುವರಿ ಹಾಲನ್ನು ಸದುಪಯೋಗ ಪಡಿಸಿಕೊಳ್ಳಲು ರಾಜ್ಯದ ಅಂಗನವಾಡಿ ಮಕ್ಕಳಿಗೆ ಉಚಿತ ಹಾಲು ಒದಗಿಸಲು ಸರ್ಕಾರ ನಿರ್ಧರಿಸಿದೆಯೇ?

ಈ) ಹಾಗಿದ್ದಲ್ಲಿ, ಎಷ್ಟು ಅಂಗನವಾಡಿ ಮಕ್ಕಳಿಗೆ ಈ ರೀತಿ ಉಚಿತ ಹಾಲನ್ನು ಒದಗಿಸಲಾಗುವುದು?

ಉ) ಇದರಿಂದ ಸರ್ಕಾರಕ್ಕೆ ಹೆಚ್ಚುವರಿ ಖರ್ಚಾಗುವ ವಾರ್ಷಿಕ ಹಣವೆಷ್ಟು?

ಊ) ಈ ಉಚಿತ ಹಾಲನ್ನು ಒದಗಿಸುವ ಕಾರ್ಯಕ್ರಮ ಯಾವಾಗ ಪ್ರಾರಂಭವಾಗುತ್ತದೆ?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಪಶುಸಂಗೋಪನೆ ಇಲಾಖೆ ಮಾದರಿ ಸಮೀಕ್ಷೆ ಪ್ರಕಾರ, ರಾಜ್ಯದಲ್ಲಿ ದಿನಂಪ್ರತಿ ಸರಾಸರಿ 125 ಲಕ್ಷ ಲೀಟರ್ ಹಾಲು ಉತ್ಪಾದನೆ ಆಗುತ್ತಿದೆ.

ಆ) ಗ್ರಾಮೀಣ ಪ್ರದೇಶಗಳಲ್ಲಿ ಸೇವಿಸಬಹುದಾದ ಹಾಲಿನ ವಿವರಗಳು ಲಭ್ಯವಿಲ್ಲದ ಕಾರಣ, ದಿನಂಪ್ರತಿ ಎಷ್ಟು ಹಾಲಿನ ಬೇಡಿಕೆ ಇದೆ ಎಂಬುದರ ಬಗ್ಗೆ ಒಂದು ನಿರ್ದಿಷ್ಟವಾದ ಅಂದಾಜು ಮಾಡಲಾಗಿಲ್ಲ.

ಇ) ಇದು ಪರಿಶೀಲನೆಯಲ್ಲಿದೆ.

ಈ) ಸುಮಾರು 28.34 ಲಕ್ಷ ಮಕ್ಕಳು

ಉ) ರೂ. 115.33 ಕೋಟಿಗಳು

ಊ) ಅಂತಿಮ ನಿರ್ಣಯ ಕೈಗೊಂಡ ನಂತರ ಇದನ್ನು ಪರಿಶೀಲಿಸಲಾಗುವುದು.

ಬೆಂಗಳೂರಿನ ಕೆ.ಎಂ.ಎಫ್ ನಲ್ಲಿ ಹಾಲಿನ ಪುಡಿಯ ದಾಸ್ತಾನು

609(795) ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೆ.ಎಂ.ಎಫ್. ನಲ್ಲಿರತಕ್ಕ ಹಾಲಿನ ಪುಡಿಯ ದಾಸ್ತಾನಿನ ಪ್ರಮಾಣವೆಷ್ಟು?

ಆ) ಈ ಹಾಲಿನ ಪುಡಿಯ ದಾಸ್ತಾನು ಎಷ್ಟು ತಿಂಗಳಿನಿಂದ ಗೋದಾಮಿನಲ್ಲಿದೆ?

ಇ) ಈ ಹಾಲಿನ ಪುಡಿಯ ಆಯುಷ್ಯವೆಷ್ಟು?

ಈ) ಈ ಹಾಲಿನ ಪುಡಿ ನಿರುಪಯುಕ್ತವಾಗುವುದಕ್ಕೆ ಮೊದಲು ವಿತರಣೆ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ದಿನಾಂಕ: 1.7.2002ಕ್ಕೆ ಕರ್ನಾಟಕ ಹಾಲು ಮಹಾಮಂಡಳಿಯ ಸದಸ್ಯ ಹಾಲು ಒಕ್ಕೂಟಗಳ ಅಡಿಯಲ್ಲಿ ಪ್ರಸ್ತುತ 1816.67 ಮೆಟ್ರಿಕ್ ಟನ್ ಹಾಲಿನ ಪುಡಿ ದಾಸ್ತಾನು ಇರುತ್ತದೆ.

ಆ) ತಿಂಗಳುವಾರು ತಯಾರಾಗಿದ್ದು ದಾಸ್ತಾನಿರುವ ಕೆನೆರಹಿತ ಹಾಲಿನ ಪುಡಿಯ ವಿವರಗಳು ಈ ಕೆಳಕಂಡಂತಿವೆ:

1.	ಅಕ್ಟೋಬರ್ 2001	321,82 ಎಂ.ಟಿ.
2.	ನವೆಂಬರ್ 2001	175,17 ಎಂ.ಟಿ
3.	ಡಿಸೆಂಬರ್ 2001	70,00 ಎಂ.ಟಿ
4.	ಜನವರಿ 2002	180,01 ಎಂ.ಟಿ
5.	ಫೆಬ್ರವರಿ 2002	76,77 ಎಂ.ಟಿ
6.	ಮಾರ್ಚ್ - ಮೇ 2002	-
7.	ಜೂನ್ 2002	505,25 ಎಂ.ಟಿ
8.	ಜುಲೈ 2002	339,65 ಎಂ.ಟಿ.
		1578,00 ಎಂ.ಟಿ
	ವಿವಿಧ ಡೇರಿಗಳಲ್ಲಿ ಸ್ವಂತ ಬಳಕೆಗೆ ಬೇಕಾಗಿರುವ ಕೆನೆರಹಿತ ಹಾಲಿನ ಪುಡಿ	238,00 ಎಂ.ಟಿ.
	ಒಟ್ಟು ದಾಸ್ತಾನು	1816.67

ಇ) ಕೆನೆರಹಿತ ಹಾಲಿನ ಪುಡಿಯ ಆಯಸ್ಸು ಸಾಮಾನ್ಯವಾಗಿ 12 ರಿಂದ 18 ತಿಂಗಳುಗಳು.

ಈ) ಪ್ರಸ್ತುತ ದಾಸ್ತಾನಿನಲ್ಲಿರುವ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ಉತ್ಪಾದಿಸಿದ ಹಾಲಿನ ಪುಡಿಯಲ್ಲಿ ಈಗಾಗಲೇ 400 ಮೆಟ್ರಿಕ್ ಟನ್ ಮಾರಾಟಕ್ಕೆ ಖರೀದಿದಾದರರಿಂದ ಒಪ್ಪಿಗೆ ಬಂದಿದ್ದು ಜುಲೈ ಅಂತ್ಯದೊಳಗೆ ವಿಲೇವಾರಿಯಾಗಲಿದೆ. ಆದುದರಿಂದ ಹಾಲಿನ ಪುಡಿ ನಿರುಪಯುಕ್ತ ಆಗುವ ಸಂಭವವಿರುವುದಿಲ್ಲ. ಉಳಿದಿರುವ ಹಾಲಿನ ಪುಡಿಯನ್ನು ಕ್ರಮೇಣ ವಿಲೇವಾರಿ ಮಾಡಲಾಗುವುದು.

ಉತ್ತರ ಕರ್ನಾಟಕದಲ್ಲಿ ರೇಷ್ಮೆ ಅಭಿವೃದ್ಧಿಪಡಿಸುವುದು

610(943) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲು ಅನುಕೂಲಕರವಾದ ಹವಾಗುಣ ಇರುವುದರಿಂದ ರೇಷ್ಮೆ ಬೆಳೆಯನ್ನು ಹೆಚ್ಚಿಗೆ ಬೆಳೆಯಲು ಯಾವ ವಿಶೇಷವಾದ ಕ್ರಮವನ್ನು ಕೈಗೊಳ್ಳಲಾಗಿದೆ.